## ಪದ್ಯ ೪. ಕೌರವೇಂದ್ರನ ಕೊಂದೆ ನೀನು

**ಆ) ೩-೪ ವಾಕ್ಯಗಳಲ್ಲಿ ಉತ್ತರಿಸಿ**

**೧) ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?**

ಉ) ಕೃಷ್ಣನು ಕರ್ಣನನ್ನು ಮೈದುನ ತನದ ಸರಸದಲ್ಲಿ ಬರಸೆಳೆದು ಪಕ್ಕದಲ್ಲಿ ಕೂರಿಸಿಕೊಂಡು "ಕರ್ಣ ನಿಮಗೂ(ಪಾಂಡವರಿಗೂ) ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

**೨) ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**

ಉ) ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು ಇಂದ್ರನ ಅನುಗ್ರಹದಿಂದ ಅರ್ಜುನನನ್ನು ಮಕ್ಕಳಾಗಿ ಪಡೆದಳು. ಮಾದ್ರಿಯು ಅಶ್ವಿನಿದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.

**೩) ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**

ಉ) ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಗಂಟಲು ಬಿಗಿಯಾಗಿ ಕಣ್ಣಿನಲ್ಲಿ ನೀರು ತುಂಬಿತು. ಮನದಲ್ಲಿ ಅತಿಯಾಗಿ ದುಃಖಿತನಾಗಿ "ಅಯ್ಯೋ, ಕುರುಪತಿಗೆ ಕೇಡಾಯಿತು" ಎಂದನು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ ಸುಮ್ಮನೆ ಹೋಗುವುದೆ? ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

**೪) ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

ಉ) ಕೃಷ್ಣನು ಕರ್ಣನಲ್ಲಿ ಸಲಿಗೆ ತೋರಿ ಅವನ ಜನ್ಮ ರಹಸ್ಯವನ್ನು ತಿಳಿಸಿ ರಾಜ್ಯದ ಆಮಿಷವನ್ನು ಒಡ್ಡಿದಾಗ ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ. ಪಾಂಡವರು ಕೌರವರು ನನಗೆ ಸೇವೆ ಮಾಡುವುದು ಬೇಕಿಲ್ಲ. ಆದರೆ ನನ್ನನ್ನು ಸಲುಹಿದ ದುರ್ಯೋಧನನಿಗೆ ಅವನ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆಂಬ ನಂಬಿಕೆ ಇತ್ತು. ಆದರೆ ನೀನು ನನಗೆ ಪಾಂಡವರು ಸಹೋದರರೆಂದು ತಿಳಿಸಿ ಅವರನ್ನು ಕೊಲ್ಲದಂತೆ ಮಾಡಿದೆ. ಇದರಿಂದಾಗಿ ನೀನು ಸುಯೋಧನನ್ನು ಕೊಂದೆ" ಎಂದನು.

**೫) ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

ಉ) ವೀರ ಕೌರವನು ನನಗೆ ಒಡೆಯ ಅವನ ಶತ್ರುಗಳೇ ನನ್ನ ಶತ್ರಗಳು. ಕೃಷ್ಣ ಕೇಳು ಮುಂದಿನ ಯುದ್ಧ ಸಾಗರದಲ್ಲಿ ಪಾಂಡವರಿಗೆ ನನ್ನ ನಿಜ ಭುಜಬಲ ಪರಾಕ್ರಮವನ್ನು ತೋರಿಸುವೆನು ಯುದ್ಧದಲ್ಲಿ ಚತುರಂಗ ಬಲವನ್ನು ಮಾರಿಗೌತಣ ಕೊಡುವೆನು ಹೀಗೆ ಸೂರ್ಯನ ಮೇಲೆ ಆಣೆ ಮಾಡುವೆ. ಪಾಂಡವರನ್ನು ಬಿಟ್ಟು ಉಳಿದ ಎಲ್ಲರನ್ನು ನಾಶ ಮಾಡಿ ನನ್ನ ಪ್ರಾಣಾರ್ಪಣೆಯನ್ನು ಮಾಡುವುದರ ಮೂಲಕ ಕೌರವನ ಋಣ ತೀರಿಸುವೆ ಎಂದನು. ಇದು ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವಾಗಿದೆ.

**ಇ) ೮-೧೦ ವಾಕ್ಯಗಳಲ್ಲಿ ಉತ್ತರಿಸಿ**

**೧. ಕರ್ಣನಿಗೆ ಶ್ರೀ ಕೃಷ್ಣನು ಒಡ್ಡಿದ ಆಮಿಷಗಳೇನು?**

ಉ) ಕೃಷ್ಣನು "ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ್ತ ಕರ್ಣನ ಜನ್ಮವೃತ್ತಾಂತವನ್ನು ಹೇಳಿದ ಶ್ರೀ ಕೃಷ್ಣನು ಕರ್ಣನಿಗೆ "ನಿನ್ನನ್ನು ಹಸ್ತಿನಾಪುರ ರಾಜ್ಯದ ರಾಜನನ್ನಾಗಿ ಮಾಡುವೆ. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶಗಳು ಮರು ಮಾತನಾಡದೇ ಸೇವೆಯನ್ನು ಮಾಡುವರು. ನೀನು ಸುಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ... ಹೇಳು. ಎಡಭಾಗದಲ್ಲಿ ಕೌರವೇಂದ್ರರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದಗಡೆ ಮಾದ್ರ, ಮಗಧ, ಯಾದವ ರಾಜ್ಯದ ರಾಜರು. ಮಧ್ಯದಲ್ಲಿ ನೀನು ರಾಜಸಭೆಯ ಪ್ರಕಾಶಿಸುವ ಸೊಬಗನ್ನು ತೊರೆದು, ದುರ್ಯೋಧನ ಹೇಳಿದ ಮಾತಿಗೆಲ್ಲ 'ಒಡೆಯ ಪ್ರಸಾದ, ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಆಮಿಷ ಒಡ್ಡಿದನು.

**೨. ಪಾಂಡವರು ಸೋದರರೆಂದು ತಿಳಿಸಿದಾಗ ಕರ್ಣನ ಮನಃಸ್ಥಿತಿಯನ್ನು ತಿಳಿಸಿ**

ಉ) ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳ ಸೆರೆಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡನು. ಅವನು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ತನ್ನ ಜನ್ಮ ರಹಸ್ಯ ತಿಳಿದಾಗ ಅವನಿಗೆ ತಾನು ಏನು ಮಾಡಬೇಕೆಂಬುದು ತಿಳಿಯದಾಯಿತು. ಆಗ ತನ್ನ ಮನಸ್ಸಿನಲ್ಲಿ ಚಿಂತಿಸುತ್ತಾ 'ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ; ಸುಮ್ಮನೆ ಹೋಗುವುದೇ? ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು. "ಮರುಳ ಮಾಧವ, ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನ್ನು ಕೊಂದೆ" ಎಂದು ಪರಿತಪಿಸುತ್ತಾನೆ. "ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**೩. ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**

ಉ) ಕೃಷ್ಣನು ಕರ್ಣನ ಜನ್ಮ ರಹಸ್ಯವನ್ನು ತಿಳಿಸುತ್ತಾ ಆತನನ್ನು ಸಕಲ ಸಾಮ್ರಾಜ್ಯಕ್ಕೆ ಚಕ್ರವರ್ತಿಯನ್ನಾಗಿ ಮಾಡುವುದಾಗಿ ತಿಳಿಸುತ್ತಾನೆ. ಸೂರ್ಯನ ಅನುಗ್ರಹದಿಂದ ಜನಿಸಿದ ಕರ್ಣನನ್ನು ಮಗುವಾಗಿದ್ದಾಗ ಕುಂತಿಯು ನೀರಿನಲ್ಲಿ ತೇಲಿಬಿಟ್ಟಿದ್ದರಿಂದ ಮಾತೃವಾತ್ಸಲ್ಯದಿಂದ ವಂಚಿತನಾಗಿ ಅಂಬಿಗನ ಮನೆಯಲ್ಲಿ ಸೂತಪುತ್ರನಾಗಿ

ಬೆಳೆಯಬೇಕಾಯಿತು. ಸೂತಪುತ್ರನೆಂದು ಸಮಾಜದಲ್ಲಿ ಆತನ ಶಕ್ತಿ ಸಾಮರ್ಥ್ಯಕ್ಕೆ ಆದ್ಯತೆ ದೊರೆಯಲಿಲ್ಲ. ಅಂತಹ ಸಂದರ್ಭದಲ್ಲಿ ದುರ್ಯೋಧನ ಕರ್ಣನನ್ನು ಗೆಳೆಯನಾಗಿ ಸ್ವೀಕರಿಸಿ ಅಂಗರಾಜ್ಯದ ಅಧಿಪತಿಯನ್ನಾಗಿಸುತ್ತಾನೆ. ಆತನಿಗೆ ಒಂದು ಸ್ಥಾನ, ಗೌರವಗಳನ್ನು ದೊರಕಿಸಿಕೊಡುತ್ತಾನೆ. ಈ ಕಾರಣಗಳಿಂದ ಕರ್ಣನು ದುರ್ಯೋಧನನೇ ತನಗೆ ಒಡೆಯ, ಆತನ ಹಗೆಗಳು ನನಗೂ ಹಗೆಗಳೇ, ಆತನ ಅಭಿಮಾನ ನನ್ನ ಅಭಿಮಾನ, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತಾನೆ. 'ಯುದ್ಧದಲ್ಲಿ ನಿಜ ಪರಾಕ್ರಮದ ಶ್ರೇಷ್ಠತೆಯನ್ನು ತೋರಿಸುತ್ತೇನೆ' ಎನ್ನುವುದು ಕರ್ಣನ ಜಾಯಮಾನಕ್ಕೆ ಸರಿಯಾಗಿಯೇ ಇದೆ. ಕೌರವನು ತನಗೆ ಮಾಡಿದ ಉಪಕಾರವನ್ನು ಯುದ್ಧರಂಗದಲ್ಲಿ ತೀರಿಸುತ್ತೇನೆ. ತಮ್ಮಂದಿರನ್ನು ನೋಯಿಸದೆ, ಸೈನ್ಯಬಲವನ್ನು ಮಾರಿಗೆ ಔತಣವನ್ನಾಗಿ ನೀಡಿ, ಅನ್ನದಾತನ ಋಣವನ್ನು ಮುಗಿಸಿ, ಶರೀರವನ್ನು ತ್ಯಜಿಸುತ್ತೇನೆ ಎಂಬ ಕರ್ಣನ ಮಾತು ಆತನ ಸ್ವಾಮಿ ಭಕ್ತಿಗೆ ಸಾಕ್ಷಿಯಾಗಿದೆ. ಸ್ಥಾನ, ಗೌರವ ಹಾಗೂ ಕೀರ್ತಿ ದೊರಕಿಸಿ ಕೊಟ್ಟ ಒಡೆಯನಿಗೆ ತನ್ನ ಪ್ರಾಣವನ್ನು ಸಮರ್ಪಿಸುವುದು ಧರ್ಮವೇ ಆಗಿದೆ. ಎಂಬ ಕರ್ಣನ ನಿರ್ಧಾರ ಸರಿಯಾಗಿದೆ.

**ಈ) ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ**

**೧. "ರವಿ ಸೂತನ ಕಿವಿಯಲಿ ಬಿತ್ತಿದನು ಭಯವೆ"**

ಈ ವಾಕ್ಯವನ್ನು *ಕುಮಾರವ್ಯಾಸ* ಅವರು ಬರೆದಿರುವ **"ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ**: ಕೃಷ್ಣನು ಪಾಂಡವ ಹಾಗೂ ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂತಿರುಗುವಾಗ ಕರ್ಣನನ್ನು ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ:** "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇಧವಿಲ್ಲ ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

**೨. "ಬಾಯ್ದಂಬಲಕೆ ಕೈಯಾನುವರೆ?"**

ಈ ವಾಕ್ಯವನ್ನು *ಕುಮಾರವ್ಯಾಸ* ಅವರು ಬರೆದಿರುವ **"ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳಿದನು.

**ಸಂದರ್ಭ**: ಕೃಷ್ಣನು ಪಾಂಡವ ಹಾಗೂ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂತಿರುಗುವಾಗ ಕರ್ಣನನ್ನು ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** "ಕರ್ಣ ನೀನು ಹಸ್ತಿನಾಪೂರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**೩. "ಜೀಯ ಹಸಾದವೆಂಬುದು ಕಷ್ಟ"**

ಈ ವಾಕ್ಯವನ್ನು *ಕುಮಾರವ್ಯಾಸ* ಅವರು ಬರೆದಿರುವ **"ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

**ಸಂದರ್ಭ**: ಕೃಷ್ಣನು ಪಾಂಡವ ಹಾಗೂ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂತಿರುಗುವಾಗ ಕರ್ಣನನ್ನು ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ

**ಸ್ವಾರಸ್ಯ:** "ಎಡಭಾಗದಲ್ಲಿ ಕೌರವೇಂದ್ರರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದಗಡೆ ಮಾದ್ರ, ಮಗಧ, ಯಾದವ ರಾಜ್ಯದ ರಾಜರು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಪ್ರಸದವೆಂಬುದು ಕಷ್ಟವಾಗುವುದಿಲ್ಲವೇ?" ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೪. "ನಿನ್ನ ಪದೆಸೆಯ ಬಯಸುವನಲ್ಲ"**

ಈ ವಾಕ್ಯವನ್ನು *ಕುಮಾರವ್ಯಾಸ* ಅವರು ಬರೆದಿರುವ **"ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

**ಸಂದರ್ಭ**: ಕೃಷ್ಣನು ಪಾಂಡವ ಹಾಗೂ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂತಿರುಗುವಾಗ ಕರ್ಣನನ್ನು ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ

**ಸ್ವಾರಸ್ಯ:** ತನ್ನ ಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

**೫. "ಮಾರಿಗೌತಣವಾಯ್ತು ನಾಳಿನ ಭಾರತವು"**

ಈ ವಾಕ್ಯವನ್ನು *ಕುಮಾರವ್ಯಾಸ* ಅವರು ಬರೆದಿರುವ **"ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳಿದ್ದಾನೆ.

**ಸಂದರ್ಭ**: ಕೃಷ್ಣನು ಪಾಂಡವ ಹಾಗೂ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂತಿರುಗುವಾಗ ಕರ್ಣನನ್ನು ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮೇಲಿನಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮೇಲಿನ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೪. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗುರುತಿಸಿ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.**

| | | | |
|---|---|---|---|
| ೧. ತನುಜ | : ಮಗ | : : ಸಖ | **: ಸ್ನೇಹಿತ(ಗೆಳೆಯ)** |
| ೨. ಯುದ್ಧ | : ಜುದ್ದ | : : ಪ್ರಸಾದ | **: ಹಸಾದ** |
| ೩. ಬೇಧವಿಲ್ಲ | : ಆಗಮಸಂಧಿ | : : ನಿಮ್ಮಡಿಗಳಲಿ | **: ಲೋಪಸಂಧಿ** |
| ೪. ಕಂದ : ನಾಲ್ಕು ಸಾಲು | | : : ಷಟ್ಪದಿ | **: ಆರು ಸಾಲು** |